**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.148/2020**

| | | |
|---|---|---|
| ಸಾಕ್ಷಿದಾರರ ಹೆಸರು | : | ಪೂಜಾ |
| ಗಂಡನ ಹೆಸರು | : | ಕೆ.ಎಸ್. ಕಿರಣ ಕುಮಾರ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಬಂಗಾರದ ಅಂಗಡಿಯಲ್ಲಿ ಕೂಲಿ ಕೆಲಸ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 4

ಸಿ.ಡಬ್ಲ್ಯೂ 12

ದಿ: 15-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ಮೃತ ಕಿರಣ ಕುಮಾರ ನನ್ನ ಗಂಡ. ನಮಗೆ ಇಬ್ಬರು ಮಕ್ಕಳು ಸೃಜನ್ ಮತ್ತು ಸುಪ್ರಿತ್ ಕೆ.ಕೆ. ಇರುತ್ತಾರೆ. ನಾನು, ನನ್ನ ಗಂಡ ಮತ್ತು ಇಬ್ಬರು ಮಕ್ಕಳು ದಾವಣಗೆರೆಯ ದೇವರಾಜ ಬಡಾಣೆಯ ಎ-ಬ್ಲಾಕ್ 5 ನೇ ಕ್ರಾಸ್ ನಲ್ಲಿ ವಾಸವಿದ್ದೆವು. ಈಗ ನನ್ನ ಮಗ ಸೃಜನ್ ತೀರಿಕೊಂಡಿದ್ದಾನೆ. ಕರೋನಾ ಸಮಯದಲ್ಲಿ ಅಂದರೆ ದಿಃ 25-05-2020 ರಂದು ನನ್ನ ಅತ್ತೆಯ ತವರು ಮನೆ ಶಂಕರನಹಳ್ಳಿಗೆ ನಾನು, ನನ್ನ ಗಂಡ ಮತ್ತು ನಮ್ಮ ಮಕ್ಕಳು ಹೋಗಿದ್ದೆವು. ಬೆಳಿಗ್ಗೆ 11.00 ಗಂಟೆಗೆ ನನ್ನ ದೊಡ್ಡ ಮಗ ಸೃಜನ್ ಮತ್ತು ನನ್ನ ಗಂಡ ಕಿರಣ ಕುಮಾರರವರು ಸುತ್ತಾಡಿಲಿಕ್ಕೆ ಬೈಕ್ ನಂಬರ ಕೆ.ಎ. 17 ಇ.ವಿ. 9970 ತೆಗೆದುಕೊಂಡು ಹೋಗಿದ್ದರು. ನಾನು ಮನೆಯಲ್ಲಿರುವಾಗ ಮಧ್ಯಾಹ್ನ 12.00 ಗಂಟೆಗೆ ನನ್ನ ಗಂಡ ಮತ್ತು ನನ್ನ ಮಗ ಕ್ವಾರಿಯ ನೀರಿನಲ್ಲಿ ಬಿದ್ದು ತೀರಿಕೊಂಡಿದ್ದಾರೆ ಅಂತ ಸುದ್ದಿ ಬಂದಿತು. ಆಗ ನಾನು ಮತ್ತು 2 ನೇ ಮಗ ಸುಪ್ರಿತ್ ಮತ್ತು ಗ್ರಾಮಸ್ಥರು ಕ್ವಾರಿಯ ಹತ್ತಿರ ಹೋಗಿ ನೋಡಿದೆವು. ಆಗ ನನ್ನ ಮಗ ಆಗಲೇ

ತೀರಿಕೊಂಡಿದ್ದ. ಆತನ ಮೃತ ದೇಹ ಮೊದಲನೇ ದಿನ ಸಿಕ್ಕಿತು. ಆದರೆ ನನ್ನ ಗಂಡ ಮೃತ ದೇಹ ಸಿಕ್ಕಿರಲಿಲ್ಲ. ಮಾರನೇ ದಿನ ನನ್ನ ಗಂಡ ಮೃತ ದೇಹ ಶಂಕರನಹಳ್ಳಿ ಕ್ವಾರಿಯಲ್ಲಿ ಸಿಕ್ಕಿತು.

2. ನನಗೆ ಆ ಶಂಕರನಹಳ್ಳಿಯಲ್ಲಿ ಸುಮಾರು 12-13 ವರ್ಷಗಳಿಂದ ಅಕ್ರಮವಾಗಿ ಕಲ್ಲಿನ ಕ್ವಾರಿ ನಡೆಸುತ್ತಿರುವುದಾಗಿ ಮಾಹಿತಿ ಬಂತು. ಅದರ ಮಾಲೀಕರು ಲಲಿತಮ್ಮ ಇದ್ದು, ಮತ್ತು ಅವರ ಗಂಡ ಜಯಪ್ಪರವರು ಕ್ವಾರಿಯನ್ನು ನಡೆಸುತ್ತಿದ್ದರು. ಜಯಪ್ಪರವರ ಮರಣದ ನಂತರ ಅವರ ಮಗ ಹೇಮರಾಜ ರವರು ಕಲ್ಲಿನ ಕ್ವಾರಿಯನ್ನು ನಡೆಸುತ್ತಿದ್ದಾರೆ. ಆ ಕಲ್ಲಿನ ಕ್ವಾರಿಯಲ್ಲಿ ಸುಮಾರು ಜಾನುವಾರುಗಳು ಮತ್ತು ಜನ ಬಿದ್ದು ತೀರಿಕೊಂಡಿದ್ದಾರೆ ಅಂತ ವಿಷಯ ಗೊತ್ತಾಯಿತು. ಮೇಲಾಧಿಕಾರಿಗಳು ಆ ಕಲ್ಲಿನ ಕ್ವಾರಿಯನ್ನು ಬಂದು ಮುಚ್ಚಿಸಿದ್ದರು. ಆದರೂ ಸಹಿತ ಆ ಕಲ್ಲಿನ ಕ್ವಾರಿಯಲ್ಲಿರುವ ಗುಂಡಿಗಳನ್ನು ಹಾಗೆ ಬಿಟ್ಟಿದ್ದರು. ಇದರಿಂದ ಆ ಗುಂಡಿಗಳಲ್ಲಿ ನೀರು ತುಂಬಿತ್ತು. ಆರಂಭದಲ್ಲಿ ಅದು 30-40 ಅಡಿ ಆಳವಾಗಿತ್ತು. ಆ ಕಲ್ಲಿನ ಕ್ವಾರಿ ಸರ್ವೇ ನಂ.23/3 ರಲ್ಲಿ ಇತ್ತು. ಮತ್ತೆ ಹೇಳುತ್ತೇನೆ ಅದರ ಸರ್ವೇ ನಂ.25/3 ಇರುತ್ತದೆ. ಆ ಕಲ್ಲಿನ ಕ್ವಾರಿಯು ರಸ್ತೆಯ ಬದಿಯಲ್ಲಿತ್ತು. ಆ ಕಲ್ಲಿನ ಕ್ವಾರಿಗೆ ಯಾವುದೇ ರಕ್ಷಣೆ ಇರಲಿಲ್ಲ ಮತ್ತು ನಿಷೇಧಿತ ಬೋರ್ಡ ಸಹಿತ ಇರಲಿಲ್ಲ ಮತ್ತು ಬೇಲಿ ಸಹ ಇರಲಿಲ್ಲ. ಒಂದು ವೇಳೆ ರಕ್ಷಣೆ ಇದ್ದಿದ್ದರೆ ನನ್ನ ಗಂಡ ಮತ್ತು ಮಗ ತೀರಿಕೊಳ್ಳುತ್ತಿರಲಿಲ್ಲ. ಕಲ್ಲು ಕ್ವಾರಿಯಲ್ಲಿ ನನ್ನ ಗಂಡ ಮತ್ತು ಮಗ ಬಹಿರ್ದೆಸೆಗೆ ಹೋಗಿದ್ದು ಕಾಲು ಜಾರಿ ಅದರ ನೀರಿನಲ್ಲಿ ಬಿದ್ದಿರುತ್ತಾರೆ. ಕಲ್ಲು ಕ್ವಾರಿಯ ಮಾಲೀಕರೆ ನನ್ನ ಗಂಡ ಮತ್ತು ಮಗನ ಸಾವಿಗೆ ಕಾರಣ ಆಗಿರುತ್ತಾರೆ. ಸಾಕ್ಷಿಗೆ ನಿಪಿ-2 ಮತ್ತು 3 ರ ಫೋಟೋಗಳನ್ನು ತೋರಿಸಲಾಗಿ ಅದರಲ್ಲಿ ತನ್ನ ಮಗ ಮತ್ತು ಗಂಡನ ಮೃತ ದೇಹ ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಶ್ರೀ ಇ.ಎಫ್., ವಕೀಲರಿಂದ ಆರೋಪಿತರ ಪರವಾಗಿ**:

3. ದಿಃ 25-05-2020 ರಂದು ನನ್ನ ಅತ್ತೆಯ ತವರು ಮನೆ ಶಂಕರನಹಳ್ಳಿಗೆ ನಾನು, ನನ್ನ ಗಂಡ ಮತ್ತು ನಮ್ಮ ಮಕ್ಕಳು ಹೋಗಿದ್ದೆವು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಬೆಳಿಗ್ಗೆ 11.00 ಗಂಟೆಗೆ ನನ್ನ ದೊಡ್ಡ ಮಗ ಸೃಜನ್ ಮತ್ತು ನನ್ನ ಗಂಡ ಕಿರಣ ಕುಮಾರರವರು ಸುತ್ತಾಡಿಲಿಕ್ಕೆ ಬೈಕ್

ನಂಬರ ಕೆ.ಎ. 17 ಇ.ವಿ. 9970 ತೆಗೆದುಕೊಂಡು ಹೋಗಿದ್ದರು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಮನೆಯಲ್ಲಿರುವಾಗ ಮಧ್ಯಾಹ್ನ 12.00 ಗಂಟೆಗೆ ನನ್ನ ಗಂಡ ಮತ್ತು ನನ್ನ ಮಗ ಕ್ವಾರಿಯ ನೀರಿನಲ್ಲಿ ಬಿದ್ದು ತೀರಿಕೊಂಡಿದ್ದಾರೆ ಅಂತ ಸುದ್ದಿ ಬಂದಿತು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆಗ ನಾನು ಮತ್ತು 2 ನೇ ಮಗ ಸುಪ್ರಿತ್ ಮತ್ತು ಗ್ರಾಮಸ್ಥರು ಕ್ವಾರಿಯ ಹತ್ತಿರ ಹೊಗಿ ನೋಡಿದೆವು, ಆಗ ನನ್ನ ಮಗ ಆಗಲೇ ತೀರಿಕೊಂಡಿದ್ದ, ಆತನ ಮೃತ ದೇಹ ಮೊದಲನೇ ದಿನ ಸಿಕ್ಕಿತು, ಆದರೆ ನನ್ನ ಗಂಡ ಮೃತ ದೇಹ ಸಿಕ್ಕಿರಲಿಲ್ಲ, ಮಾರನೇ ದಿನ ನನ್ನ ಗಂಡ ಮೃತ ದೇಹ ಶಂಕರನಹಳ್ಳಿ ಕ್ವಾರಿಯಲ್ಲಿ ಸಿಕ್ಕಿತು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

4. ನನಗೆ ಆ ಶಂಕರನಹಳ್ಳಿಯಲ್ಲಿ ಸುಮಾರು 12-13 ವರ್ಷಗಳಿಂದ ಅಕ್ರಮವಾಗಿ ಕಲ್ಲಿನ ಕ್ವಾರಿ ನಡೆಸುತ್ತಿರುವುದಾಗಿ ಮಾಹಿತಿ ಬಂತು, ಅದರ ಮಾಲೀಕರು ಲಲಿತಮ್ಮ ಇದ್ದು, ಮತ್ತು ಅವರ ಗಂಡ ಜಯಪ್ಪರವರು ಕ್ವಾರಿಯನ್ನು ನಡೆಸುತ್ತಿದ್ದರು, ಜಯಪ್ಪರವರ ಮರಣದ ನಂತರ ಅವರ ಮಗ ಹೇಮರಾಜ ರವರು ಕಲ್ಲಿನ ಕ್ವಾರಿಯನ್ನು ನಡೆಸುತ್ತಿದ್ದಾರೆ ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆ ಕಲ್ಲಿನ ಕ್ವಾರಿಯಲ್ಲಿ ಸುಮಾರು ಜಾನುವಾರುಗಳು ಮತ್ತು ಜನ ಬಿದ್ದು ತೀರಿಕೊಂಡಿದ್ದಾರೆ ಅಂತ ವಿಷಯ ಗೊತ್ತಾಯಿತು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮೇಲಾಧಿಕಾರಿಗಳು ಆ ಕಲ್ಲಿನ ಕ್ವಾರಿಯನ್ನು ಬಂದು ಮುಚ್ಚಿಸಿದ್ದರು, ಆದರೂ ಸಹಿತ ಆ ಕಲ್ಲಿನ ಕ್ವಾರಿಯಲ್ಲಿರುವ ಗುಂಡಿಗಳನ್ನು ಹಾಗೆ ಬಿಟ್ಟಿದ್ದರು, ಇದರಿಂದ ಆ ಗುಂಡಿಗಳಲ್ಲಿ ನೀರು ತುಂಬಿತ್ತು, ಆರಂಭದಲ್ಲಿ ಅದು 30-40 ಅಡಿ ಆಳವಾಗಿತ್ತು, ಆ ಕಲ್ಲಿನ ಕ್ವಾರಿ ಸರ್ವೇ ನಂ.25/3 ಇರುತ್ತದೆ, ಆ ಕಲ್ಲಿನ ಕ್ವಾರಿಯು ರಸ್ತೆಯ ಬದಿಯಲ್ಲಿತ್ತು, ಆ ಕಲ್ಲಿನ ಕ್ವಾರಿಗೆ ಯಾವುದೇ ರಕ್ಷಣೆ ಇರಲಿಲ್ಲ ಮತ್ತು ನಿಷೇಧಿತ ಬೋರ್ಡ ಸಹಿತ ಇರಲಿಲ್ಲ ಮತ್ತು ಬೇಲಿ ಸಹ ಇರಲಿಲ್ಲ, ಒಂದು ವೇಳೆ ರಕ್ಷಣೆ ಇದ್ದಿದ್ದರೆ ನನ್ನ ಗಂಡ ಮತ್ತು ಮಗ ತೀರಿಕೊಳ್ಳುತ್ತಿರಲಿಲ್ಲ, ಕಲ್ಲು ಕ್ವಾರಿಯಲ್ಲಿ ನನ್ನ ಗಂಡ ಮತ್ತು ಮಗ ಬಹಿರ್ದೆಸೆಗೆ ಹೋಗಿದ್ದು ಕಾಲು ಜಾರಿ ಅದರ ನೀರಿನಲ್ಲಿ ಬಿದ್ದಿರುತ್ತಾರೆ, ಕಲ್ಲು

ಕ್ವಾರಿಯ ಮಾಲೀಕರೆ ನನ್ನ ಗಂಡ ಮತ್ತು ಮಗನ ಸಾವಿಗೆ ಕಾರಣ ಆಗಿರುತ್ತಾರೆ ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

5. ಸರ್ವೇ ನಂ. 25/3 ರಲ್ಲಿ ಕಲ್ಲಿನ ಕ್ವಾರಿ ಇತ್ತು ಅಂತ ಯಾರು ಹೇಳಿದರು ಅಂದರೆ ಗ್ರಾಮ ಲೆಕ್ಕಾಧಿಕಾರಿಗಳು ಬಂದು ತಿಳಿಸಿದರು. ಸದರಿ ಸರ್ವೇ ನಂಬರನಲ್ಲಿ ಕಲ್ಲಿನ ಕ್ವಾರಿ ಇಲ್ಲ ಅಲ್ಲಿ ಅಕ್ರಮವಾಗಿ ಕಲ್ಲಿನ ಕ್ವಾರಿ ನಡೆಸುತ್ತಿರಲಿಲ್ಲ ಅಂದರೆ ಸರಿಯಲ್ಲ. ಗ್ರಾಮಸ್ಥರ ಮತ್ತು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-2 ಮತ್ತು 3 ರಲ್ಲಿ ನಾನು ಇರುವುದಿಲ್ಲ. ನಾನು ಹೇಳಿದ ದಿಃ 25-05-2020 ರಂದು ಕೋವಿಡ್ ಇದ್ದು ಯಾರೂ ಹೊರಗಡೆ ಹೋಗಬಾರದಿತ್ತು ಅಂತ ನಿಷೇಧ ಇತ್ತು ಅಂದರೆ ನಿಜ. ನಿಷೇಧ ಇದ್ದು ಆದರೂ ನನ್ನ ಗಂಡ ಮತ್ತು ನನ್ನ ಮಗ ಆ ರೀತಿ ಆಚೆಗೆ ಹೋಗಿ ಅವರ ಸಾವಿಗೆ ಅವರೇ ಕಾರಣ ಆಗಿರುತ್ತಾರೆ ಅಂದರೆ ಸರಿಯಲ್ಲ. ಗ್ರಾಮಸ್ಥರು ನನಗೆ ಆ ಕಲ್ಲಿನ ಕ್ವಾರಿಯಲ್ಲಿ ಜಾನುವಾರು ಮತ್ತು ಜನ ತೀರಿಕೊಂಡಿರುತ್ತಾರೆ ಅಂತ ಹೇಳಿದರು. ಆ ಕಲ್ಲಿನ ಕ್ವಾರಿಯಲ್ಲಿ ಯಾವುದೇ ಜಾನುವಾರು ಮತ್ತು ಜನ ತೀರಿಕೊಂಡಿರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.